

بِسْمِ اللّٰہِ الرَّحْمٰنِ الرَّحِیْمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 16–03–2018 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸಂದರ್ಭದಲ್ಲಿ ಸಹಾಬ ರಿಝ್ವಾನುಲ್ಲಾಹಿ ಅಲೈಹಿಮ್‌ರವರ ಸ್ಥಾನದ ಬಗ್ಗೆ ವಿವರಿಸುತ್ತಾ ಹೇಳಿದರು: ಸಹಾಬ ರಿಝ್ವಾನುಲ್ಲಾಹಿ ಅಲೈಹಿಮ್ ಅಜ್‌ಮಈನ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ವಭಾವಗುಣಗಳ ಪ್ರಕಾಶಮಾನವಾದ ಸಾಕ್ಷ್ಯಗಳಾಗಿದ್ದಾರೆ. ಯಾರಾದರೂ ಈ ಸಾಕ್ಷ್ಯಾಧಾರಗಳನ್ನು ನಾಶ ಮಾಡುವುದಾದರೆ ಅವನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಬುವ್ವತ್ತನ್ನು ನಾಶಮಾಡಲು ಇಚ್ಛಿಸುವವನಾಗುತ್ತಾನೆ. ಆದುದರಿಂದ ಬಹುಮಾನ್ಯರಾದ ಸಹಾಬರನ್ನು ಯಾರು ಗೌರವಿಸುತ್ತಾನೋ ಅವನೇ ನಿಜವಾಗಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಗೌರವಿಸುವವನಾಗಿರುತ್ತಾನೆ. ಯಾರು ಸಹಾಬರನ್ನು ಗೌರವಭಾವದಿಂದ ಕಾಣುವುದಿಲ್ಲವೋ ಅವನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಗೌರವಿಸುವುದಿಲ್ಲ. ಏಕೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುತ್ತಿರುವಾಗ ಅವರ ಸಹಾಬರನ್ನು ದ್ವೇಷಿಸಲು ಎಂದೂ ಸಾಧ್ಯವಿಲ್ಲ. ಸಹಾಬರು ಎಂತಹ ಪರಿಶುದ್ಧ ಜಮಾಅತಾಗಿದ್ದರೆಂದರೆ ಅವರು ತಮ್ಮ ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಎಂದೂ ಬೇರ್ಪಡಲಿಲ್ಲ. ತಮ್ಮ ಪ್ರವಾದಿಯ ಮಾರ್ಗದಲ್ಲಿ ಜೀವಾರ್ಪಣೆ ಮಾಡಲು ಸಹ ಅವರು ಎಂದೂ ಹಿಂಜರಿಯಲಿಲ್ಲ. ಸಹಾಬರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವುದರಲ್ಲಿ ಎಷ್ಟು ತಲ್ಲೀನರಾದರೆಂದರೆ ಅವರು ತಮ್ಮ ಪ್ರವಾದಿಗೋಸ್ಕರ ಪ್ರತಿಯೊಂದು ಕಷ್ಟ ಮತ್ತು ವಿಪತ್ತನ್ನು ಸಹಿಸಿಕೊಳ್ಳಲು ಸದಾ ಸಿದ್ಧರಾಗಿರುತ್ತಿದ್ದರು.

ಸಹಾಬರ ಈ ಸ್ಥಾನ ಮಹತ್ವವನ್ನು ಪ್ರತಿಯೊಬ್ಬ ಅಹ್ಮದಿ ತನ್ನ ಮುಂದೆ ಇರಿಸಬೇಕಾಗಿದೆ. ಸಹಾಬರ ಸ್ವಭಾವಗುಣಗಳು ನಮಗೆ ಮಾದರಿಯಾಗಿವೆ. ನಾವು ಅವುಗಳನ್ನು ನಮ್ಮ ಜೀವಿತದ ಭಾಗವನ್ನಾಗಿ ಮಾಡಲು ಪ್ರಯತ್ನ ಮಾಡಬೇಕಾಗಿದೆ. ಈಗ ನಾನು ಸಹಾಬರಿಗೆ ಸಂಬಂಧಿಸಿದ ಕೆಲವು ಘಟನೆಗಳನ್ನು ವಿವರಿಸುವೆನು. ಅಬೂ ದುಜಾನ ಅನ್ಸಾರಿ ಎಂಬ ಸಹಾಬಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಕ್ಕೆ ಹಿಜ್ರತ್ ಮಾಡುವ ಮೊದಲೇ ಇಸ್ಲಾಮ್ ಧರ್ಮ ಸ್ವೀಕರಿಸಿದ ಮದೀನದ ನಿವಾಸಿಯಾಗಿದ್ದರು. ಅವರು ಬದ್ರ್ ಯುದ್ಧದಲ್ಲಿ ಶೌರ್ಯದಿಂದ ಹೋರಾಡಿದ್ದರು. ಉಹುದ್ ಯುದ್ಧದಲ್ಲಿ ಹೋರಾಡುವ ಭಾಗ್ಯ ಸಹ ಅವರಿಗೆ ಲಭಿಸಿತು. ಯುದ್ಧದ ಸ್ಥಿತಿಯಲ್ಲಿ ಬದಲಾವಣೆ ಸಂಭವಿಸಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪದಲ್ಲಿ ಬಾಕಿಯಾಗಿ ಉಳಿದಿದ್ದ ಸಹಾಬರಲ್ಲಿ ಅವರೂ ಸಹ ಸೇರಿದ್ದರು. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ನಡೆಯುತ್ತಿದ್ದ ಆಕ್ರಮಣಗಳನ್ನು ಪ್ರತಿರೋಧಿಸುತ್ತಾ ಬಹಳ ಹೆಚ್ಚು ಗಾಯಗೊಂಡಿದ್ದರು. ಆದರೆ ಅವರು ತೀವ್ರವಾಗಿ ಗಾಯಗೊಂಡವರಾಗಿದ್ದರೂ ರಣಾಂಗಣದಿಂದ ಹಿಂದೆ ಸರಿಯಲಿಲ್ಲ. ನಂತರ ಯಮಾಮದ ಯುದ್ಧದಲ್ಲಿ ಮುಸೈಲಿಮ ಕಝ್ಝಾಬನ ವಿರುದ್ಧ ಹೋರಾಡುತ್ತಾ ಅವರು ಶಹೀದರಾದರು. ಕೋಟೆಯ ಬಾಗಿಲು ಒಳಭಾಗದಿಂದ ಚಿಲಕ ಹಾಕಿ ಮುಚ್ಚಲಾಗಿತ್ತು. ಆ ಬಾಗಿಲನ್ನು ತೆರೆಯಲು ಅವರೊಂದು ಉಪಾಯ ಮಾಡಿದರು. ಅವರು ತನ್ನ ಸಂಗಡಿಗರೊಂದಿಗೆ ಹೇಳಿದರು: ನನ್ನನ್ನು ಕೋಟೆ ಗೋಡೆಯ ಮೇಲಿನಿಂದ ಕೋಟೆಯೊಳಗೆ ಎಸೆಯಿರಿ ಎಂದು. ಆ ಗೋಡೆ ಬಹಳ ಎತ್ತರವಾಗಿತ್ತು. ಅವರನ್ನು ಕೋಟೆಯೊಳಗೆ ಬೀಳುವಂತೆ ಎಸೆದಾಗ ಅವರ ಕಾಲು ಮುರಿಯಿತು. ಹೀಗೆ ಆಗಿದ್ದರೂ ಅವರು ಬಹಳ ಶೌರ್ಯದಿಂದ ಹೋರಾಡಿ ಕೋಟೆಯ ಬಾಗಿಲು ತೆರೆದರು. ಆಗ ಮುಸ್ಲಿಮರು ಕೋಟೆಯೊಳಗೆ ಪ್ರವೇಶಿಸಿದರು. ಅಬೂ ದುಜಾನ ಅನ್ಸಾರಿ ಹೋರಾಟದಲ್ಲಿ ಶಹೀದರಾದರು. ಅವರು ಒಮ್ಮೆ ರೋಗಬಾಧಿತರಾಗಿದ್ದಾಗ ಹೇಳಿದ್ದರು: ಪ್ರಾಯಶಃ ನನ್ನ ಎರಡು ಕರ್ಮಗಳು ಅಲ್ಲಾಹನು ಸ್ವೀಕರಿಸಬಹುದು. ಒಂದನೆಯದು, ನಾನು ವ್ಯರ್ಥವಾದ ಮಾತು ಹೇಳುವುದಿಲ್ಲ. ಪರದೂಷಣೆ ಮಾಡುವುದಿಲ್ಲ. ಜನರ ಅನುಪಸ್ಥಿತಿಯಲ್ಲಿ ಅವರ ಬಗ್ಗೆ ಮಾತನಾಡುವುದಿಲ್ಲ. ಎರಡನೆಯದು, ಯಾವುದೇ ಮುಸ್ಲಿಮನ ಬಗ್ಗೆ ನನ್ನ ಹೃದಯದಲ್ಲಿ ಅಸೂಯೆ ಮತ್ತು ದ್ವೇಷವಿಲ್ಲ.

ಇನ್ನೊಬ್ಬ ಸಹಾಬಿ ಹಝ್ರತ್ ಮುಹಮ್ಮದ್ ಬಿನ್ ಮಸ್ಲಮ ಆರಂಭದಲ್ಲಿ ಮುಸ್ಲಿಮರಾದ ಅನ್‌ಸಾರಿಗಳಲ್ಲಿ ಸೇರಿದ್ದರು. ಅವರು ಬಹಳ ದೊಡ್ಡ ಶೂರರೂ ನಿರ್ಭಯ ವ್ಯಕ್ತಿಯೂ ಆಗಿದ್ದರು. ಉಹುದ್ ಯುದ್ಧದಲ್ಲಿ ಅವರು ಸ್ಥಿರಚಿತ್ತರಾಗಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಮ್ಮೆ ತನ್ನ ಖಡ್ಗವನ್ನು ಅವರಿಗೆ ಕೊಟ್ಟು ಹೇಳಿದರು: ಬಹುದೇವಾರಾಧಕರ ವಿರುದ್ಧ ಯುದ್ಧ ಮಾಡುತ್ತಾ ಇರುವಾಗ ನೀವು ಈ ಖಡ್ಗವನ್ನು ಬಳಸುತ್ತಾ ಇರಬೇಕು. ಆದರೆ ಮುಸ್ಲಿಮರು ಪರಸ್ಪರ ಒಬ್ಬರಿನ್ನೊಬ್ಬರ ವಿರುದ್ಧ ಹೋರಾಟ ನಡೆಸುವ ಕಾಲ ಬಂದರೆ ನೀವು ಈ ಖಡ್ಗವನ್ನು ಮುರಿದು ಹಾಕಿ ಮನೆಯಲ್ಲಿ ಕುಳಿತು ಬಿಡಿರಿ. ನೀವು ಮೃತನಾಗುವ ತನಕ ಅಥವಾ ನಿಮ್ಮನ್ನು ಯಾರಾದರು ಆಕ್ರಮಿಸುವ ತನಕ ಅಲ್ಲಿಯೇ ಇರಿ. ಆ ಸಹಾಬಿ ಈ ಉಪದೇಶವನ್ನು ಸ್ವೀಕರಿಸಿದರು. ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹು ಶಹೀದರಾದ ನಂತರ ಅವರು ಆ

ಖಡ್ಗವನ್ನು ಮುರಿದು ಹಾಕಿದರು. ಅವರು ಮರದ ಒಂದು ಖಡ್ಗ ತಯಾರಿಸಿ ಒರೆಯಲ್ಲಿಟ್ಟುಕೊಳ್ಳುತ್ತಿದ್ದರು. ಕೆಲವು ಸಹಾಬರು ಹೇಳುತ್ತಾರೆ: ಹಝ್ರತ್ ಉಸ್ಮಾನ್ ಶಹೀದರಾದ ನಂತರ ಮುಸ್ಲಿಮರಲ್ಲಿ ಪ್ರಾರಂಭವಾದ ಹಿಂಸಾಚಾರದಿಂದ ಯಾರಾದರೂ ಪ್ರಭಾವಿತರಾಗದೆ ಇದ್ದುದಾದರೆ ಅದು ಮುಹಮ್ಮದ್ ಬಿನ್ ಮಸ್ಲಮರು ಮಾತ್ರವಾಗಿದ್ದಾರೆ. ಅವರು ಹಿಂಸಾಚಾರಗಳಿಂದ ದೂರ ಸರಿದು ತನ್ನನ್ನು ರಕ್ಷಿಸಿಕೊಳ್ಳಲು ಮರುಭೂಮಿಯಲ್ಲಿ ಡೇರೆ ಹಾಕಿ ವಾಸಿಸುತ್ತಿದ್ದರು.

ಸಹಾಬರು ಎಂತಹ ಜನರಾಗಿದ್ದರೆಂದರೆ, ಇಸ್ಲಾಮ್ ಧರ್ಮವನ್ನು ನಾಶಮಾಡಲು ಬಹುದೇವಾರಾಧಕರು ಆಕ್ರಮಣ ಮಾಡುತ್ತಿದ್ದಾರೆ, ಆದುದರಿಂದ ಅವರ ವಿರುದ್ಧ ಹೋರಾಡಿರಿ, ಎಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರೊಡನೆ ಹೇಳಿದಾಗ ಅವರು ವೀರಾವೇಶದಿಂದ ಕಾದಾಡಿದರು. ಮುಸ್ಲಿಮರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ಉಪದೇಶಗಳನ್ನು ಅನುಸರಿಸುತ್ತಿದ್ದ ಕಾಲದ ತನಕ ಅವರ ಶಕ್ತಿ ಹೇಗಿತ್ತೆಂದರೆ ಅವರು ಜಯಗಳಿಸುತ್ತಾ ಇದ್ದರು. ಆದರೆ ಮುಸ್ಲಿಮರಲ್ಲಿ ಆಂತರಿಕ ಕಲಹ ಪ್ರಾರಂಭವಾದಾಗ, ಕಪಟ ವಿಶ್ವಾಸಿಗಳ ಮಾತುಗಳನ್ನು ನಂಬಿ ಪರಸ್ಪರ ಒಬ್ಬರಿನ್ನೊಬ್ಬರ ಕೊರಳನ್ನು ಕತ್ತರಿಸಲು ಪ್ರಾರಂಭಿಸಿದಾಗ ಮುಸ್ಲಿಮರ ರಾಜ್ಯಭಾರ ನೆಲೆ ನಿಂತಿದ್ದರೂ ಐಕ್ಯತೆ ನಾಶವಾಯಿತು. ಮೆಲ್ಲಮೆಲ್ಲಗೆ ರಾಜ್ಯಾಧಿಕಾರ ಸಹ ಬಲಹೀನವಾಗುತ್ತಾ ಹೋಯಿತು. ಈಗ ನಾವು ನೋಡುವುದೇನೆಂದರೆ ಮುಸ್ಲಿಮರ ಮಧ್ಯೆ ಇರುವ ಭಿನ್ನಾಭಿಪ್ರಾಯಗಳು ಅತ್ಯಂತ ತೀವ್ರ ಮಟ್ಟವನ್ನು ತಲಪಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಇನ್ನೊಂದು ಭವಿಷ್ಯವಾಣಿ ಸಹ ಈಡೇರಿದೆ. ಅವರು ಹೇಳಿದ್ದರು: ಅಂಧಕಾರದ ಕಾಲಘಟ್ಟದ ನಂತರ ಪ್ರಕಾಶದ ಕಾಲಘಟ್ಟ ಪ್ರಾರಂಭವಾದಾಗ, ಎಂದರೆ ಮಸೀಹ್ ಮೌಊದ್‌ರ ಕಾಲಘಟ್ಟ ಪ್ರಾರಂಭವಾದಾಗ ಮಸೀಹ್ ಮೌಊದರನ್ನು ನಂಬಬೇಕು. ಅವರ ಜಮಾಅತಿನಲ್ಲಿ ಸೇರಬೇಕು. ಅದರಲ್ಲಿಯೇ ಅನುಗ್ರಹವಿದೆ ಎಂದು. ಆದರೆ ಆಗಮಿಸಿದ ಮಹಾತ್ಮರನ್ನು ಮುಸ್ಲಿಮರು ನಂಬದ ಕಾರಣ ಮುಸ್ಲಿಮರು ತಮ್ಮ ದೇಶಗಳಲ್ಲಿಯೇ ಒಬ್ಬರಿನ್ನೊಬ್ಬರ ರಕ್ತ ಕುಡಿಯಬೇಕೆಂಬ ಬಾಯಾರಿಕೆ ಹೊಂದಿದವರಾಗಿದ್ದಾರೆ. ಇದರ ಪರಿಣಾಮದಿಂದ ಮುಸ್ಲಿಮೇತರ ಲೋಕ ಕೃತ್ಯರೂಪದಲ್ಲಿ ಮುಸ್ಲಿಮರ ಮೇಲೆ ಅಧಿಕಾರ ಚಲಾಯಿಸುತ್ತಾ ಇದೆ.

ಆರಂಭಕಾಲದ ಒಬ್ಬ ಭಾಗ್ಯಶಾಲಿ ಸಹಾಬಿ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯಾಗಿದ್ದರು. ಮದೀನದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆತಿಥೇಯನಾಗುವ ಭಾಗ್ಯ ಅವರಿಗೆ ಲಭಿಸಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕದಿಂದ ಮದೀನಕ್ಕೆ ಆಗಮಿಸಿದಾಗ ಅವರ ಮನೆಯಲ್ಲಿ ವಾಸಮಾಡಲು ತೊಡಗಿದ್ದರು. ಮನೆಯ ಮಹಡಿಯಲ್ಲಿ ಅಬೂ ಅಯ್ಯೂಬ್ ಅನ್‌ಸಾರಿಯ ಕುಟುಂಬ ವಾಸಿಸುತ್ತಿತ್ತು. ಕೆಳಭಾಗವನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಬಿಟ್ಟುಕೊಟ್ಟಿದ್ದರು. ಅಂದಾಜು ಆರು ಏಳು ತಿಂಗಳುಗಳ ಕಾಲ ಪೈಗಂಬರರು ಅಲ್ಲಿ ವಾಸವಿದ್ದರು. ಅಬೂ ಅಯ್ಯೂಬ್ ಅನ್ಸಾರಿ ಅತಿಥಿ ಸತ್ಕಾರ ನಿರತರಾಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಂಡ ನಂತರ ತಟ್ಟೆಯಲ್ಲಿ ಉಳಿಕೆಯಾದ ಆಹಾರವನ್ನು ಅವರು ತಿನ್ನುತ್ತಿದ್ದರು. ಹೀಗೆ ವರದಿಯಾಗಿದೆ: ತಟ್ಟೆಯಲ್ಲಿ ಬಾಕಿಯಾದ ಆಹಾರದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬೆರಳಿನ ಗುರುತು ಕಾಣುವಲ್ಲಿಂದ ಅವರು ತಿನ್ನಲು ತೊಡಗುತ್ತಿದ್ದರು. ಅವರ ಈ ರೀತಿಯ ಪ್ರೀತಿ ಪ್ರೇಮಗಳ ಕಥೆಗಳು ಅದ್ಭುತಕರವಾಗಿವೆ.

ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಖೈಬರ್ ಯುದ್ಧದಲ್ಲಿ ಯಹೂದಿಯರ ನಾಯಕ ಹತನಾಗಿದ್ದರು. ಅವನ ಪುತ್ರಿ ಸಫಿಯರನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವಿವಾಹವಾಗಿದ್ದರು. ಈ ವಿವಾಹದ ಮರುದಿನ ಬೆಳಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮಾಝ್‌ಗೋಸ್ಕರ ಮನೆಯಿಂದ ಹೊರಗೆ ಬಂದಾಗ ಅಬೂ ಅಯ್ಯೂಬ್ ಅನ್ಸಾರಿ ಮನೆಯ ಹೊರಗೆ ಪಹರೆಗೋಸ್ಕರ ನಿಂತಿರುವುದಾಗಿ ಕಂಡರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರೊಂದಿಗೆ ಕೇಳಿದರು: ನೀವು ಪಹರೆ ನೀಡುತ್ತಿರುವುದೇಕೆ? ಆಗ ಅಬೂ ಅಯ್ಯೂಬ್ ಅನ್ಸಾರಿ ಹೇಳಿದರು: ಹಝ್ರತ್ ಸಫಿಯರವರ ಸಂಬಂಧಿಕರಿಗೆ ನಮ್ಮಿಂದ ಹಾನಿಯುಂಟಾಗಿದೆ. ಆದುದರಿಂದ ಯಾರಾದರೂ ಸೇಡು ತೀರಿಸಲು ಆಗಮಿಸಬಹುದೆಂದು ಯೋಚಿಸಿ ನಾನು ನಿಮಗೋಸ್ಕರ ಪಹರೆ ನೀಡಲು ಆಗಮಿಸಿದೆ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೀಗೆ ಪ್ರಾರ್ಥಿಸಿದರು: ಓ ಅಲ್ಲಾಹ್, ಅಬೂ ಅಯ್ಯೂಬ್‌ರನ್ನು ನೀನು ಯಾವಾಗಲೂ ನಿನ್ನ ಸಂರಕ್ಷಣೆಯಲ್ಲಿಡು– ಅವರು ರಾತ್ರಿಯಿಡೀ ನನ್ನನ್ನು ಸಂರಕ್ಷಿಸಲು ಸಿದ್ಧನಾಗಿದ್ದ ಹಾಗೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ಪ್ರಾರ್ಥನೆಯ ಫಲಸ್ವರೂಪವಾಗಿ, ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ ಅನೇಕ ಯುದ್ಧಗಳಲ್ಲಿ ಭಾಗವಹಿಸಿದ್ದರು. ಪ್ರತಿಯೊಂದು ಯುದ್ಧದಲ್ಲಿ ಅವರು ಜಯಶಾಲಿಯಾಗಿ ಮರಳಿ ಬಂದರು ಮತ್ತು ದೀರ್ಘಾಯುಸ್ಸನ್ನು ಪಡೆದರು.

ಇನ್ನೊಬ್ಬ ಸಹಾಬಿ ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಅರಬಿ ಭಾಷೆಯ ಪ್ರಸಿದ್ಧ ಕವಿಯಾಗಿದ್ದರು. ಅವರಿಗೆ ಶಾಯಿದೆ ರಸೂಲ್ ಎಂಬ ಬಿರುದು ಸಹ ಲಭಿಸಿತ್ತು. ಬದರ್ ಯುದ್ಧದಲ್ಲಿ ಜಯಗಳಿಸಿದ ಸಮಾಚಾರವನ್ನು ಮದೀನಕ್ಕೆ ಮೊದಲು ತಲಪಿಸಿದವರೂ ಅವರಾಗಿದ್ದರು. ಹಝ್ರತ್ ಉರ್‌ವಾ ವರದಿ ಮಾಡುತ್ತಾರೆ: ಒಂದು ಸ್ಥಳದಲ್ಲಿ ಮುಸ್ಲಿಮರು, ಬಹುದೇವಾರಾಧಕರು ಮತ್ತು ಯಹೂದಿಯರು ಒಟ್ಟಿಗೆ ಸೇರಿ ಕುಳಿತಿದ್ದಾಗ ಅಲ್ಲಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಗಮಿಸಿದಾಗ ಸವಾರಿ ಮೃಗದ ಕಾರಣದಿಂದ ಅಲ್ಲಿ ಸ್ವಲ್ಪ ಧೂಳೆದ್ದಿತು. ಅಬ್ದುಲ್ಲಾ ಬಿನ್ ಅಬಿ ಎಂಬವ ತನ್ನ ಮೂಗನ್ನು ಚಾದರದಿಂದ ಮುಚ್ಚುತ್ತಾ ಹೇಳಿದನು, ನಮ್ಮ ಮೇಲೆ ದೂಳು ಹಾಯಿಸಬೇಡಿರಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಿ ಜಮಾಯಿಸಿದವರಿಗೆ ಅಸ್ಸಲಾಮು

ಅಲೈಕುಮ್ ಹೇಳಿ ಅವರನ್ನು ಅಲ್ಲಾಹನ ಮಾರ್ಗಕ್ಕೆ ಆಮಂತ್ರಿಸಿದರು. ಮತ್ತು ಪವಿತ್ರ ಖುರ್‌ಆನ್ ವಚನಗಳನ್ನು ಅವರಿಗೆ ಕೇಳಿಸಿದರು. ಆಗ ಅಬ್ದುಲ್ಲ ಬಿನ್ ಅಬೀ ಹೀಗೆ ಹೇಳಿದ: ಇದು ಸರಿಯಲ್ಲ. ನೀವು ಹೇಳುವುದು ಸತ್ಯವಾದರೂ ನಮ್ಮ ಸಭೆಗೆ ಆಗಮಿಸಿ ನಮಗೆ ಕಷ್ಟ ನೀಡಬಾರದು. ನೀವು ನಿಮ್ಮ ಡೇರೆಗೆ ಮರಳಿ ಹೋಗಿರಿ. ನಿಮ್ಮ ಬಳಿಗೆ ಬರುವವರಿಗೆ ಮಾತ್ರ ನೀವು ಉಪದೇಶಿಸಿರಿ. ಆಗ ಅಲ್ಲಿ ಕುಳಿತಿದ್ದ ಹಝ್ರತ್ ಅಬ್ದುಲ್ಲಾ ಬಿನ್ ರವಾಹ್ ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ ತಾವು ನಮ್ಮ ಸಭೆಗಳಿಗೆ ಆಗಾಗ ಬರುತ್ತಾ ಇರಿ, ತಮ್ಮ ಆಗಮನವನ್ನು ನಾವು ಇಷ್ಟಪಡುತ್ತೇವೆ. ಅಬ್ದುಲ್ಲಾ ಬಿನ್ ರವಾಹರಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಇದ್ದ ಪ್ರೀತಿ ಮತ್ತು ಅಭಿಮಾನದ ಪ್ರಕಟಣೆ ಅದಾಗಿತ್ತು. ಅವರು ಲೌಕಿಕ ನಾಯಕರನ್ನು ಸ್ವಲ್ಪ ಮಾತ್ರ ಸಹ ಲಕ್ಷಿಸಲಿಲ್ಲ.

ಹಝ್ರತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಯುದ್ಧಕ್ಕೋಸ್ಕರ ಸಹಾಬರನ್ನು ಕಳುಹಿಸಿದಾಗ ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಸಹ ಆ ಸಹಾಬರಲ್ಲಿ ಸೇರುವವರಾಗಿದ್ದರು. ಆ ದಿನ ಜುಮುಅದ ದಿನವಾಗಿತ್ತು. ಸಹಾಬರು ಬೆಳಗೆ ಪ್ರಯಾಣ ಹೊರಟರು. ಆದರೆ ಅಬ್ದುಲ್ಲಾ ಬಿನ್ ರವಾಹ ಹೇಳಿದರು, ನಾನು ಜುಮುಅ ನಮಾಝನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆ ನಿರ್ವಹಿಸಿ ಅನಂತರ ಹೊರಟು ಸಹಾಬರೊಂದಿಗೆ ಸೇರುವೆನು. ಜುಮುಅ ನಮಾಝ್ ನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬ್ದುಲ್ಲಾ ಬಿನ್ ರವಾಹರನ್ನು ಮಸ್‌ಜಿದ್‌ನಲ್ಲಿ ಕಂಡಾಗ ಕೇಳಿದರು: ನೀವು ನಿಮ್ಮ ಜೊತೆಗಾರರೊಂದಿಗೆ ಹೋಗದಿರಲು ಕಾರಣವೇನು? ಆಗ ಅಬ್ದುಲ್ಲಾ ಬಿನ್ ರವಾಹ ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ ತಮ್ಮ ಖುತ್‌ಬ ಆಲಿಸಲು ಮತ್ತು ತಮ್ಮ ನೇತೃತ್ವದಲ್ಲಿ ಜುಮುಅ ನಮಾಝ್ ನಿರ್ವಹಿಸಲು ನಾನು ಬಹಳ ಆಶೆ ಹೊಂದಿದ್ದೆ. ಅನಂತರ ಹೋಗಿ ಉಳಿದವರೊಂದಿಗೆ ಮಾರ್ಗ ಮಧ್ಯೆ ನಾನು ಸೇರುವೆನು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಭೂಮಿಯಲ್ಲಿರುವುದನ್ನೆಲ್ಲಾ ನೀವು ಖರ್ಚು ಮಾಡಿದರೂ ಮಾರ್ಗದರ್ಶನ ಪ್ರಕಾರ ಬೆಳಗ್ಗೆ ಹೊರಟವರು ಗಳಿಸುವ ಪುಣ್ಯವನ್ನು ನೀವು ಖಂಡಿತ ಗಳಿಸಲಾರಿರಿ. ಅನಂತರ ಹೀಗೆ ವರದಿಯಾಗಿದೆ: ಯಾವುದಾದರೂ ದಂಡಯಾತ್ರೆಗೆ ಹೊರಡಲು ನಿರ್ಧರಿಸಿದಾಗ ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಅದರಲ್ಲಿ ಎಲ್ಲರಿಗಿಂತ ಮುಂದೆ ಇರುತ್ತಿದ್ದರು. ಅವರು ಎಲ್ಲರಿಗಿಂತಲೂ ಹಿಂದೆ ಮದೀನಕ್ಕೆ ಮರಳಿ ಬರುತ್ತಿದ್ದರು.

ಹಝ್ರತ್ ಉರ್‌ವ ಬಿನ್ ಝುಬೈರ್ ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೌತ ಯುದ್ಧಕ್ಕೋಸ್ಕರ ಹಝ್ರತ್ ಝೈದ್ ಬಿನ್ ಹಾರಿಸರನ್ನು ಸೇನಾಧಿಪತಿಯಾಗಿ ನೇಮಿಸಿ ಹೇಳಿದರು: ಝೈದ್ ಶಹೀದರಾದರೆ ಹಝ್ರತ್ ಜಅಫರ್ ಬಿನ್ ಅಬೀ ತಾಲಿಬ್ ಸೇನಾಧಿಪತಿಯಾಗಲಿ. ಅವರು ಸಹ ಶಹೀದರಾದರೆ ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಸೇನಾಧಿಪತಿಯಾಗಲಿ. ಅಬ್ದುಲ್ಲಾ ಸಹ ಶಹೀದರಾದರೆ ಮುಸ್ಲಿಮರು ತಮಗಿಷ್ಟವಿರುವವರನ್ನು ತಮ್ಮ ಸೇನಾಧಿಪತಿಯಾಗಿ ಮಾಡಲಿ ಎಂದು ಹೇಳಿದರು. ಈ ಸೈನ್ಯ ಹೊರಡುವ ಮತ್ತು ಅವರಿಗೆ ವಿದಾಯ ಹೇಳುವ ಸಂದರ್ಭದಲ್ಲಿ ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಅಳಲು ಪ್ರಾರಂಭಿಸಿದರು. ನೀವು ಏಕೆ ಅಳುತ್ತಿರುವಿರಿ ಎಂದು ಪ್ರಶ್ನಿಸಿದಾಗ ಅವರು ಹೇಳಿದರು: ಅಲ್ಲಾಹನಾಣೆ ನನಗೆ ಲೋಕದ ಬಗ್ಗೆ ಖಂಡಿತವಾಗಿಯೂ ಯಾವ ಪ್ರೀತಿಯೂ ಇಲ್ಲ. ಆದರೆ ನಾನು ಪವಿತ್ರ ಖುರ್‌ಆನಿನ ವಚನ **ವಇನ್ ಮಿನ್‌ಕುಮ್ ಇಲ್ಲಾ ವಾರಿದುಹಾ, ಕಾನ ಅಲಾರಬ್ಬಿಕ ಹತ್‌ಮನ್ ಮಖ್‌ಝಿಯ್ಯಾ.** ನಿಮ್ಮಲ್ಲಿ ಯಾರೂ ಅದನ್ನು ಹಾದು ಹೋಗದೆ ಇರುವುದಿಲ್ಲ. ಇದು ನಿಮ್ಮ ಪ್ರಭುವಿನಿಂದ ನಿರ್ಧರಿಸಲ್ಪಟ್ಟ ವಿಧಿಯಾಗಿದೆ. (19:72). ಇದರ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದುದನ್ನು ನಾನು ಆಲಿಸಿರುವೆನು. ಪ್ರತಿಯೊಬ್ಬ ವ್ಯಕ್ತಿ ಆವಶ್ಯಕವಾಗಿಯೂ ಅಗ್ನಿಯನ್ನು ಎದುರಿಸಲಿರುವನು. ಆದುದರಿಂದ ನಾನು ಭಯಪಡುತ್ತೇನೆ ಸಿರಾತ್ ಸೇತುವೆಯನ್ನು ಏರಿ ದಾಟಿ ಇಳಿಯುವಾಗ ನನ್ನ ಸ್ಥಿತಿ ಏನಾಗುವುದೆಂದು. ಅಲ್ಲಾಹನಿಗೆ ಭಯಪಡುವ ಈ ಜನರ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗೆ ಅತ್ಯುತ್ತಮ ಅಂತಿಮಗತಿ ಲಭಿಸುವ ಶುಭವಾರ್ತೆ ನೀಡಿದ ಬಗ್ಗೆ ಸಹ ವರದಿಯಾಗಿದೆ. ಮೌತ ಯುದ್ಧದಲ್ಲಿ ಶಹೀದರಾದ ಸೇನಾಧಿಪತಿಗಳ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಾನು ಅವರನ್ನು ಸ್ವರ್ಗದಲ್ಲಿ ಬಂಗಾರದ ಸಿಂಹಾಸನಗಳ ಮೇಲೆ ಕುಳಿತಿರುವುದಾಗಿ ಕಂಡಿರುವೆನು.

ರಣಾಂಗಣದಲ್ಲಿ ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಬಹಳ ಶೌರ್ಯ ಪ್ರದರ್ಶಿಸಿದರು. ಮುಸ್‌ಯಿಬ್ ಬಿನ್ ಶೈಬ ಹೇಳುತ್ತಾರೆ: ಹಝ್ರತ್ ಝೈದ್ ಮತ್ತು ನಂತರ ಹಝ್ರತ್ ಜಅಫರ್ ಶಹೀದರಾದಾಗ ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಯುದ್ಧ ಕ್ಷೇತ್ರದಲ್ಲಿ ಸೇನಾಧಿಪತಿಯಾದರು. ಯುದ್ಧರಂಗದಲ್ಲಿ ಅವರಿಗೆ ಈಟಿಯ ತಿವಿತ ಉಂಟಾದಾಗ ರಕ್ತವು ಧಾರಾಕಾರವಾಗಿ ಶರೀರದಿಂದ ಹರಿಯತೊಡಗಿತು. ಅವರು ತನ್ನ ಕೈಚಾಚಿ ರಕ್ತವನ್ನು ಕೈಯ್ಯಲ್ಲಿ ತೆಗೆದುಕೊಂಡು ತಮ್ಮ ಮುಖಕ್ಕೆ ಸವರಿದರು. ಅವರು ಮುಸ್ಲಿಮರು ಮತ್ತು ಶತ್ರುಗಳ ಸೇನಾದಳಗಳ ಮಧ್ಯೆ ಬಿದ್ದು ಬಿಟ್ಟರು. ಅವರು ತಮ್ಮ ಕೊನೆಯುಸಿರಿನ ತನಕ ಸೇನಾಧಿಪತಿಯಾಗಿ ಮುಸ್ಲಿಮರಿಗೆ ಧೈರ್ಯ ನೀಡುತ್ತಾ ಇದ್ದರು. ಅವರು ಅತ್ಯಂತ ಉದ್ವೇಗ ಭರಿತರಾಗಿ ಮುಸ್ಲಿಮರನ್ನು ಉತ್ತೇಜಿಸುತ್ತಿದ್ದರು. ಅವರು ತಮ್ಮ ನೆರವಿಗೆ ಕರೆಯುತ್ತಾ ಹೇಳಿದರು: ನಿಮ್ಮ ಸಹೋದರನ ಶರೀರ ಶತ್ರುಗಳ ಮುಂದೆ ಬಿದ್ದಿದೆ. ನೀವು ಮುಂದೆ ಸಾಗಿ ಶತ್ರುಗಳನ್ನು ಈ ಸಹೋದರನ ದಾರಿಯಿಂದ ದೂರಸರಿಸಿರಿ. ಆಗ ಮುಸ್ಲಿಮರು ಬಹಳ ತೀವ್ರವಾಗಿ ಶತ್ರುಗಳನ್ನು ಆಕ್ರಮಿಸಿದರು ಮತ್ತು ನಿರಂತರವಾಗಿ ಪದೇ ಪದೇ ಆಕ್ರಮಣ ಮಾಡಿದರು. ಆ ಸಂದರ್ಭದಲ್ಲಿ ಹಝ್ರತ್ ಅಬ್ದುಲ್ಲಾ ಶಹೀದ್ ಆದರು. ಅವರ ಒಂದು ವೈಶಿಷ್ಟ್ಯದ ಬಗ್ಗೆ ಅವರ ವಿಧವೆ ಎಷ್ಟು ಸುಂದರ ಸಾಕ್ಷ್ಯ ನೀಡಿದ್ದಾರೆಂದು

ನೋಡಿರಿ. ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಮನೆಯಿಂದ ಹೊರಗೆ ಹೋಗುವ ಮೊದಲು ಎರಡು ರಕಅತ್ ನಫ್ಲ್ ನಮಾಝ್ ನಿರ್ವಹಿಸದೆ ಮನೆಯಿಂದ ಹೊರಗೆ ಹೋಗುತ್ತಿರಲಿಲ್ಲ. ಅವರು ಹೊರಗಿನಿಂದ ಬಂದು ಮನೆಗೆ ಪ್ರವೇಶಿಸಿದಾಗ ಅವರು ಮಾಡುತ್ತಿದ್ದ ಪ್ರಥಮ ಕೆಲಸ ವುಝು ಮಾಡಿ ಎರಡು ರಕಅತ್ ನಫ್ಲ್ ನಮಾಝ್ ನಿರ್ವಹಿಸುವುದಾಗಿತ್ತು.

ಹಝ್ರತ್ ಅಬೂ ಲೈಲ ಹೇಳುತ್ತಾರೆ: ಒಮ್ಮೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖುತ್‌ಬ ನೀಡುತ್ತಿದ್ದಾಗ ಹೇಳಿದರು: ಓ ಜನರೇ ಕುಳಿತುಕೊಳ್ಳಿರಿ. ಹಝ್ರತ್ ಅಬೂ ರವಾಹ ಮಸ್‌ಜಿದ್‌ನಿಂದ ಹೊರಗೆ ಖುತ್‌ಬ ಆಲಿಸಲು ಆಗಮಿಸುತ್ತಾ ಇದ್ದರು. ಅವರು ತಕ್ಷಣ ಅಲ್ಲಿಯೇ ಕುಳಿತುಕೊಂಡರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವರನ್ನು ಸಂಬೋಧಿಸಿ ಹೇಳಿದರು: **ಝಾದಕಲ್ಲಾಹು ಹಿರ್‌ಸನ್ ಅಲಾ ತೌಇಯತಿಲ್ಲಾಹಿ ವ ತೌಇಯತಿರ್‌ರಸೂಲ್.** ಓ ಅಬ್ದುಲ್ಲಾ ಬಿನ್ ರವಾಹ, ಅಲ್ಲಾಹನನ್ನು ಮತ್ತು ಅವನ ಸಂದೇಶವಾಹಕರನ್ನು ಅನುಸರಿಸುವ ನಿಮ್ಮ ಈ ಭಾವನೆಯನ್ನು ಅಲ್ಲಾಹನು ಇನ್ನಷ್ಟು ವರ್ಧಿಸಲಿ.

ಅವರು ಉನ್ನತ ಶ್ರೇಣಿಯ ಕವಿಯೂ ಆಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಸ್ಥಾನದಲ್ಲಿ ಕವಿಗಳಾಗಿದ್ದ ಹಝ್ರತ್ ಕಅಬ್ ಬಿನ್ ಮಾಲಿಕ್ ಮತ್ತು ಹಝ್ರತ್ ಹಸ್ಸಾನ್ ಬಿನ್ ಸಾಬಿತ್‌ರೊಂದಿಗೆ ಇವರು ಸಹ ಉನ್ನತ ಶ್ರೇಣಿಯ ಕವಿಯಾಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಹೇಳಿದ ಒಂದು ಪದ್ಯವನ್ನು ಅತ್ಯುತ್ತಮವಾದುದೆಂದು ಹೇಳಬಹುದಾಗಿದೆ. ಆ ಪದ್ಯ ಅವರ ಹೃತ್ಪೂರ್ವಕ ಭಾವನೆಯನ್ನು ಚೆನ್ನಾಗಿ ಪ್ರಕಟಿಸುತ್ತದೆ. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸಂಬೋಧಿಸಿ ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧತೆಯನ್ನು ಪ್ರಕಟಿಸುವ ಪ್ರಕಾಶಮಾನವಾದ, ಸ್ಪಷ್ಟವಾದ ಎಲ್ಲಾ ದೃಷ್ಟಾಂತಗಳು ಅವರ ಜೊತೆಗಿವೆ. ಆದರೆ ಅವುಗಳು ಇಲ್ಲವಾಗಿದ್ದರೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಖಚಹರೆ ಅವರ ಸತ್ಯಸಂಧತೆಯನ್ನು ಪ್ರಕಟಿಸಲು ಸಾಕಷ್ಟು ಸಾಕ್ಷ್ಯ ನೀಡುತ್ತಿದೆ. ಅವರ ಮುಖಚಹರೆಯೇ ಅವರ ಸತ್ಯಸಂಧತೆಯನ್ನು ಬಹಿರಂಗಗೊಳಿಸುತ್ತಿದೆ.

ಈ ಜನರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸತ್ಯವಾಗಿಯೂ ಪ್ರೀತಿಸುವವರಾಗಿದ್ದರು. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಖಚಹರೆಯನ್ನು ನೋಡಿ ಅವರನ್ನು ಸತ್ಯಸಂಧರೆಂದು ಗುರುತಿಸಿದರು. ಚರಿತ್ರೆಯಲ್ಲಿ ಇಬ್ಬರು ಬಾಲಕರಾದ ಸಹೋದರರ ಧೈರ್ಯದ ಆಶ್ಚರ್ಯಕರ ಘಟನೆಯ ಪ್ರಸ್ತಾಪ ಲಭಿಸುತ್ತದೆ. ಹಝ್ರತ್ ಮುಆದ್ ಬಿನ್ ಹಾರಿಸ್ ಬಿನ್ ರಫಾಅ ಮತ್ತು ಹಝ್ರತ್ ಮಊದ್ ಬಿನ್ ಹಾರಿಸ್ ಬಿನ್ ರಫಾಅ, ಇವರು ಬದ್ರ್ ಯುದ್ಧದಲ್ಲಿ ಭಾಗವಹಿಸಿದ್ದರು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್[ರ] ವರದಿ ಮಾಡುತ್ತಾರೆ: ಯುದ್ಧ ಪ್ರಾರಂಭವಾದಾಗ ನಾನು ನನ್ನ ಎಡಬಲಗಳಲ್ಲಿ ನೋಡಿದಾಗ ಅಲ್ಲಿ ಅನ್‌ಸಾರ್‌ಗಳ ಇಬ್ಬರು ಬಾಲಕರು ನನ್ನ ಬದಿಗಳಲ್ಲಿ ನಿಂತಿದ್ದರು. ಅವರನ್ನು ನೋಡಿ ನನ್ನ ಹೃದಯ ನಿರಾಶೆ ಭರಿತವಾಗಿತ್ತು. ಈ ಹುಡುಗರು ನನ್ನನ್ನು ಹೇಗೆ ತಾನೆ ರಕ್ಷಿಸಬಲ್ಲರು ಎಂದು ಚಿಂತಿಸಿದೆ. ಅವರಲ್ಲೊಬ್ಬ ನನ್ನನ್ನು ಕೇಳಿದ: ಚಚ್ಚಾ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮಕ್ಕದಲ್ಲಿ ತೀವ್ರ ಹಿಂಸೆ ನೀಡುತ್ತಿದ್ದ ಅಬೂಜಹಲ್ ಎಲ್ಲಿದ್ದಾನೆ. ಅವನನ್ನು ನಾನು ಕೊಲ್ಲುವೆನು ಅಥವಾ ಕೊಲ್ಲುವ ಪ್ರಯತ್ನದಲ್ಲಿ ಹತನಾಗುವೆನು ಎಂದು ನಾನು ಪ್ರತಿಜ್ಞೆ ಮಾಡಿದ್ದೇನೆ. ನಾನು ಅವನಿಗೆ ಉತ್ತರ ನೀಡುವ ಮೊದಲೇ ಇನ್ನೊಂದು ಬದಿಯಿಂದ ಆ ಮತ್ತೊಬ್ಬ ಬಾಲಕ ಸಹ ಇದೇ ಪ್ರಶ್ನೆ ಮೆಲ್ಲಗೆ ಕೇಳಿದನು. ಅವರ ಧೈರ್ಯ ನೋಡಿ ನಾನು ಆಶ್ಚರ್ಯಗೊಂಡೆನು. ಏಕೆಂದರೆ ಅಬೂ ಜಹಲ್ ಸೇನಾಧಿಪತಿಯಾಗಿದ್ದನು. ಅವನ ಸುತ್ತುಮುತ್ತಲೂ ಉತ್ತಮ ತರಬೇತಿ ಪಡೆದ ಸೈನಿಕರಿದ್ದರು. ನಾನು ಕೈಯಿಂದ ಅಬೂಜಹಲ್ ಕಡೆಗೆ ಸಂಜ್ಞೆ ಮಾಡಿ ಅವನೇ ಅಬೂಜಹಲ್ ಎಂದು ತೋರಿಸಿದೆನು. ಅಬ್ದುರ್ರಹ್ಮಾನ್ ಹೇಳುತ್ತಾರೆ: ನಾನು ಸೂಚಿಸಿದ ಕೂಡಲೆ ಆ ಇಬ್ಬರು ಬಾಲಕರು ಗಿಡುಗನ ಹಾಗೆ ಹಾರುತ್ತಾ ಶತ್ರುಗಳ ಸೈನ್ಯದ ಮಧ್ಯೆ ನುಸುಳುತ್ತಾ ತಕ್ಷಣ ಅಬೂಜಹಲನ ಸಮೀಪ ತಲಪಿ ಅಬೂಜಹಲನನ್ನು ಆಕ್ರಮಿಸಿದರು. ಅಬೂಜಹಲ್ ಮತ್ತು ಸಂಗಡಿಗರು ತಬ್ಬಿಬ್ಬಾದರು. ಅಬೂಜಹಲ್ ನೆಲಕ್ಕೆ ಬಿದ್ದನು. ಅಬೂಜಹಲನ ಪುತ್ರ ಇಕ್ರಿಮ ಅಲ್ಲಿ ತನ್ನ ತಂದೆಯ ಜೊತೆಗಿದ್ದರು. ಆದರೆ ಅವರಿಗೆ ತನ್ನ ಪಿತನನ್ನು ರಕ್ಷಿಸಲಾಗಲಿಲ್ಲ. ಇಕ್ರಿಮ ಮುಆಝ್‌ರನ್ನು ಹಿಂಬಾಗದಿಂದ ಆಕ್ರಮಿಸಿದಾಗ ಅವರ ಬಲಗೈ ಕತ್ತರಿಸಲ್ಪಟ್ಟಿತು. ಅದು ತೂಗಾಡುತ್ತಿತ್ತು. ಮುಆಝ್ ಅದೇ ಸ್ಥಿತಿಯಲ್ಲಿ ಇಕ್ರಿಮರನ್ನು ಬೆನ್ನಟ್ಟಿದರೂ ಇಕ್ರಿಮರನ್ನು ಆಕ್ರಮಿಸಲಾಗಲಿಲ್ಲ. ಕಡಿಯಲ್ಪಟ್ಟ ಕೈ ಹೋರಾಡಲು ತಡೆಯೊಡ್ಡುತ್ತಿದ್ದುದರಿಂದ ಮುಆಝ್ ಆ ಕೈಯನ್ನು ಎಳೆದು ಹಾಕಿ ತನ್ನ ಶರೀರದಿಂದ ಬೇರ್ಪಡಿಸಿದರು ಮತ್ತು ಹೋರಾಡಿದರು. ಈ ಬಾಲಕರಿಗೆ ತಮ್ಮ ವಿಶ್ವಾಸದ ಬಗ್ಗೆ ಇದ್ದ ಅಭಿಮಾನ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗಿದ್ದ ಅವರ ಪ್ರೀತಿ ಅವರನ್ನು ನಿರ್ಭಯಯರನ್ನಾಗಿ ಮಾಡಿತ್ತು. ಇಸ್ಲಾಮನ್ನು ನಾಶಮಾಡಲು ಇಚ್ಛಿಸುತ್ತಿದ್ದವನು, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅನೇಕ ವರ್ಷಗಳ ಕಷ್ಟ ನೀಡುತ್ತಿದ್ದವನು ತಮ್ಮ ಕೈಗಳಿಂದ ಹತನಾಗಬೇಕೆಂದು ಆ ಬಾಲಕರು ಇಚ್ಛಿಸುತ್ತಿದ್ದರು. ಅವರು ಇಂದಿನ ಕಾಲದ ಜಿಹಾದಿ ನಾಮಧೇಯರ ಹಾಗಿರಲಿಲ್ಲ. ಇಂದಿನ ಕಾಲದ ಜಿಹಾದಿ ನಾಮಧೇಯರು ಯುವಕರನ್ನು ಮತ್ತು ಮಕ್ಕಳನ್ನು ತೀವ್ರವಾದಿಗಳನ್ನಾಗಿ ಮಾಡಲು ಹೇಳುತ್ತಾರೆ– ನೀವು ಇಸ್ಲಾಮಿಗೋಸ್ಕರ ಯುದ್ಧ ಮಾಡಿರಿ ಎಂದು. ಆ ಕಾಲದ ಯುವಕರಿಗೆ ಒಂದು ಉದ್ದೇಶಲಕ್ಷ್ಯವಿತ್ತು. ನಾವು ದೂರ ಸರಿದು ವಾಸಿಸುತ್ತಿದ್ದರೂ ಶತ್ರುಗಳು ನಮ್ಮನ್ನು ಶಾಂತಿಯಿಂದ

ಜೀವಿಸಲು ಬಿಡುವುದಿಲ್ಲವಾದರೆ ಶಾಂತಿಯನ್ನು ಸ್ಥಾಪಿಸಲು ನಾವು ಪ್ರತಿಯೊಂದು ರೀತಿಯ ಬಲಿದಾನ ಅರ್ಪಿಸುವೆವು. ನಮ್ಮ ಉದ್ದೇಶ ಶಾಂತಿ ಸ್ಥಾಪನೆಯೇ ಹೊರತು ಹಿಂಸಾಚಾರ ಮಾಡುವುದಲ್ಲ. ಇಂದಿನ ಕಾಲದ ಜಿಹಾದಿಗಳು ಮತ್ತು ಅಂದಿನ ಕಾಲದಲ್ಲಿ ಜಿಹಾದ್ ಮಾಡುತ್ತಿದ್ದವರ ಮಧ್ಯೆ ಬಹಳ ವ್ಯತ್ಯಾಸವಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾನು ನನ್ನ ಜಮಾಅತಿನವರಲ್ಲಿ ಈ ಸಹಾಬರ ಉದಾಹರಣೆ ನೋಡಲು ಬಯಸುತ್ತೇನೆ. ಅವರು ಅಲ್ಲಾಹನಿಗೆ ಆದ್ಯತೆ ನೀಡಬೇಕು. ಯಾವುದೇ ವಿಷಯ ಅವರ ಮಾರ್ಗದಲ್ಲಿ ತಡೆಯೊಡ್ಡಬಾರದು. ಅವರು ತಮ್ಮ ಜೀವ ಮತ್ತು ಸಂಪತ್ತನ್ನು ನಿಸ್ಸಾರವೆಂದು ಗಣಿಸಲಿ. ಕೆಲವು ಜನರು ನನಗೆ ಬರೆಯುತ್ತಾರೆ, ಅವರಿಗೆ ವ್ಯಾಪಾರದಲ್ಲಿ ಹಾನಿ ಉಂಟಾದರೆ ಅಥವಾ ಬೇರೆ ರೀತಿಯ ಪರೀಕ್ಷೆಗಳಿಗೆ ಪಾತ್ರರಾದರೆ ಅವರು ತಕ್ಷಣ ಸಂಶಯ ಚಿತ್ತರಾಗುತ್ತಾರೆ. ನಾವು ಮಸೀಹ್ ಮೌಊದರನ್ನು ನಂಬಿದುದು ತಪ್ಪಾಯಿತೇ ಎಂದು. ಇಂತಹ ಸ್ಥಿತಿಯಲ್ಲಿ ಪ್ರತಿಯೊಬ್ಬನು ಮನವರಿಕೆ ಮಾಡಿಕೊಳ್ಳಬಹುದು ಅವನು ಮೂಲ ಉದ್ದೇಶದಿಂದ ಎಷ್ಟು ದೂರ ಸರಿದಿರುವನೆಂದು. ನೀವು ಯೋಚಿಸಿರಿ, ಸಹಾಬರು ಮತ್ತು ಇವರ ಮಧ್ಯೆ ಎಷ್ಟು ವ್ಯತ್ಯಾಸ ಇದೆ. ಸಹಾಬರು ಅಲ್ಲಾಹನ ಮಾರ್ಗದಲ್ಲಿ ಕಷ್ಟಗಳನ್ನು ಅನುಭವಿಸಿ ಅಲ್ಲಾಹನ ಪ್ರೀತಿಯನ್ನು ಗಳಿಸಲು ಆಶಿಸುವವರಾಗಿದ್ದರು. ಸಹಾಬರಿಗೆ ಕಷ್ಟಾನುಭವಗಳು ಬರದಿದ್ದಾಗ ಅವರು ರೋಧಿಸುತ್ತಾ ಇದ್ದರು. ತಮ್ಮ ಕಷ್ಟಗಳ ಮತ್ತು ಪರೀಕ್ಷೆಗಳ ತಳದಲ್ಲಿಯೇ ಅಲ್ಲಾಹನ ಸಂಪ್ರೀತಿಯ ನಿಧಿನಿಕ್ಷೇಪಗಳಿವೆ ಎಂದು ಅವರು ಮನವರಿಕೆ ಮಾಡಿಕೊಂಡಿದ್ದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪವಿತ್ರ ಖುರ್‌ಆನ್ ಸಹಾಬರ ಪ್ರಶಂಸೆಯಿಂದ ತುಂಬಿದೆ. ಸಹಾಬರ ಜೀವಿತ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧತೆಯ ಕೃತ್ಯರೂಪದ ಸಾಕ್ಷ್ಯಾಧಾರವಾಗಿದೆ. ಸಹಾಬರು ಯಾವ ಸ್ಥಾನ ತಲಪಿದ್ದರೋ ಅದರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: **ಮಿನ್‌ಹುಮ್ ಮನ್ ಖಝಾ ನಹ್‌ಬಹೂ ವಮಿನ್‌ಹುಮ್ ಮನ್ ಯನ್‌ತಝಿರು.** ಎಂದರೆ ಸಹಾಬರಲ್ಲಿ ಕೆಲವರು ಶಹಾದತ್ ಪದವಿ ಗಳಿಸಿರುವರು. ಹಾಗೆ ಅವರು ತಮ್ಮ ಮೂಲೋದ್ದೇಶ ಗಳಿಸಿದರು. ಮತ್ತೆ ಕೆಲವರು ತಮಗೆ ಶಹಾದತ್ ಲಭಿಸಲಿ ಎಂದು ಕಾಯುತ್ತಾ ಇದ್ದಾರೆ. ತಮಗೆ ದೀರ್ಘಾಯುಸ್ಸು ಲಭಿಸಲಿ, ಧಾರಾಳ ಸಂಪತ್ತು ಸಿಗಲಿ, ಸುಖ ಸಮೃದ್ಧಿ ಲಭಿಸಲಿ ಎಂದೆಲ್ಲಾ ಲೌಕಿಕ ಅಭಿಲಾಷೆಯನ್ನು ಸಹಾಬರು ಹೊಂದಿರಲಿಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸಹಾಬರ ಈ ಮಾದರಿಯನ್ನು ನಾನು ನೋಡುವಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪವಿತ್ರ ಶಕ್ತಿಯ ಪರಿಪೂರ್ಣ ಅನುಗ್ರಹದ ಬಗ್ಗೆ ತಾನಾಗಿ ಅಂಗೀಕರಿಸುತ್ತೇನೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯಾವ ರೀತಿ ಅವರನ್ನು ಪರಿಪೂರ್ಣವಾಗಿ ಬದಲಾಯಿಸಿದರು ಮತ್ತು ಅವರು ಅಲ್ಲಾಹನನ್ನು ಅಭಿಮುಖೀಕರಿಸುವಂತೆ ಮಾಡಿದರು. **ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವಅಲಾ ಆಲಿ ಮುಹಮ್ಮದಿನ್ ವಬಾರಿಕ್ ವಸಲ್ಲಿಮ್.**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾವು ಅಲ್ಲಾಹನ ಸಂಪ್ರೀತಿಯನ್ನು ಆಶಿಸುವವರಾಗಬೇಕು. ಅದು ನಮ್ಮ ಮುಖ್ಯ ಉದ್ದೇಶವಾಗಿರಬೇಕು. ನಮ್ಮ ಎಲ್ಲಾ ಪ್ರಯತ್ನ ಅಲ್ಲಾಹನ ಸಂಪ್ರೀತಿ ಗಳಿಸಲಿಕ್ಕೋಸ್ಕರವಾಗಿರಬೇಕು. ನಮಗೆ ಆ ಮಾರ್ಗದಲ್ಲಿ ಕಷ್ಟಗಳನ್ನು ಅನುಭವಿಸಬೇಕಾಗಿ ಬಂದರೂ ಸರಿ. ಅಲ್ಲಾಹನ ಸಂಪ್ರೀತಿ ಲೋಕದ ಎಲ್ಲಾ ರಸಾನುಭೂತಿಗಳಿಗಿಂತಲೂ ಶ್ರೇಷ್ಠವಾಗಿದೆ. ಅಲ್ಲಾಹನು ನಮಗೆ ಈ ಕರ್ತವ್ಯ ಈಡೇರಿಸುವ ಭಾಗ್ಯ ನೀಡಲಿ – ಆಮೀನ್.

(ಜುಮುಅ ಖುತ್‌ಬದ ಕೊನೆಯಲ್ಲಿ ಹುಝೂರ್ ಮುಕರ್ರಮ್ ಅಲ್‌ಹಾಜ್ ಇಸ್ಮಾಈಲ್ ಬಿ.ಕೆ. ಆಡೂ ಸಾಹಿಬರ ಸದ್ಗುಣಗಳನ್ನು ವಿವರಿಸಿ ಜುಮುಅ ನಮಾಝ್ ನಂತರ ಅವರ ನಮಾಝೆ ಜನಾಝ ಗಾಯಿಬ್ ನಿರ್ವಹಿಸುವುದಾಗಿ ಹೇಳಿದರು.)

*****


***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. On 16-03-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email*:** *khutuba.kannada@gmail.com*

**You can find all the Sermons archived at**: www.alislam.org/friday-sermon